**Spl.C.(Corruption)/5003/2017**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂ:** 20

**ಪಿ ಡಬ್ಲೂ:** 11

| | |
|---|---|
| ಸಾಕ್ಷಿಯ ಹೆಸರು - | ಪ್ರಕಾಶ |
| ತಂದೆಯ ಹೆಸರು - | ತಿಪ್ಪೇಸ್ವಾಮಿ |
| ವಯಸ್ಸು - | 48 ವರ್ಷ |
| ಉದ್ಯೋಗ - | ಕಾರ್ಯದರ್ಶಿ, ಮಾಕನಡಕು ಗ್ರಾಮ ಪಂಚಾಯತಿ |
| ವಾಸಸ್ಥಳ - | ಚಿಕ್ಕ ಜೋಗಿಹಳ್ಳಿ ಗ್ರಾಮ |

**ಸಾಕ್ಷಿಯನ್ನು ದಿನಾಂಕ:** 07-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಪಿ. ಪಿ. ಅವರಿಂದ**

2016 ರಲ್ಲಿ ನಾನು ಮಾಕನಡಕು ಪಂಚಾಯತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾಗ ಲೋಕಾಯುಕ್ತ ಪೋಲಿಸರು ನರೇಗಾ ಕೆಲಸಕ್ಕೆ ಸಂಬಂಧಿಸಿದಂತೆ 2012-13 ನೇ ಸಾಲಿನ ಕಡತವನ್ನು ಒದಗಿಸುವಂತೆ ಕೋರಿಕೊಂಡ ಹಿನ್ನೆಲೆಯಲ್ಲಿ ನಾನು ಅದನ್ನು ಪೋಲಿಸರಿಗೆ ಒದಗಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ: 1 ಎಂದು ಗುರುತಿಸಲಾಗಿದ್ದು, ಸಹಿಯನ್ನು ನಿಪಿ: 1(ಡಿ) ಎಂದು ಗುರುತಿಸಲಾಯಿತು.

ಇದಾಗಿ 1 ವರ್ಷದ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದು, ಅಲ್ಲಿ 1 ನೇ ಆರೋಪಿಯ ಕೈಬರಹ ಗುರುತಿಸುವಂತೆ ಹೇಳಿದ್ದು, ನಾನು ಅದನ್ನು ಗುರುತಿಸಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ: 3 ಎಂದು ಗುರುತಿಸಲಾಗಿದೆ. 1 ನೇ ಆರೋಪಿ ಪಿ ಡಿ ಓ ಆಗಿ ಕೆಲಸ ಮಾಡುತ್ತಿದ್ದ. ಸಾಕ್ಷಿ 1 ನೇ ಆರೋಪಿಯನ್ನು ಗುರುತಿಸಿದ್ದಾರೆ.

2 ಮತ್ತು 3 ನೇ ಆರೋಪಿತರು ಸದರಿ ಪಂಚಾಯತಿಯ ಅಧ್ಯಕ್ಷ ಆಗಿ ಕೆಲಸ ಮಾಡುದ್ದರು. 4 ನೇ ಆರೋಪಿ ಕಿರಿಯ ಇಂಜಿನಿಯರ್ ಆಗಿದ್ದ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ  ಜಿ ವಿ ಪಿ., ವಕೀಲರಿಂದಃ**

ಪೋಲಿಸರು ಹೇಳಿದಂತೆ ಖಾಲಿ ಹಾಳೆಯ ಮೇಲೆ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಮಹಜರು ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಆರೋಪಿಯ ಕೈ ಬರಹ ಇದ್ದ ದಾಖಲೆಯ ಮೇಲೆ ನನ್ನ ಸಹಿ ಪಡೆದಿಲ್ಲ. ನನ್ನ ಸಮಕ್ಷಮ ಯಾವುದೇ ಆರೋಪಿಯ ಕೈ ಬರಹ ದಾಖಲಿಸಲಿಲ್ಲ. ಪೋಲಿಸರು ಹೇಳಿಕೊಟ್ಟ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಯಾವುದೇ ಆರೋಪಿತರು ಗೊತ್ತಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.